ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದಿನ ರೆವಿನ್ಯೂ ಮಂತ್ರಿಗಳು ತೋಟಿ ತಳವಾರರಿಗೆ ಇಗಾಗಲೇ 75 ರೂಪಾಯಿ ಕೊಡುವ ಒಂದು ಆಜ್ಞೆಯನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ್ದು ಸರಿ ಇದೆ.

ಶ್ರೀ ಮಲ್ಲಿಕಾರ್ಜುನ ಎಂ ಖಾರ್ಗೆ.—ಇದು ಬಹಳ ಮಹತ್ವದ ಪ್ರಶ್ನೆ ಇದೆ. ಪಟೇಲರ ಬಗ್ಗೆ ಕೂಡಾ ಹಿಂದಿನ ಸರ್ಕಾರ ಒಂದು ಭರ್ಜಿಯನ್ನು ತೆಗೆದುಕೊಂಡಿತ್ತು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ಎಲ್. ಪಾಟೀಲ್.—ಈ ಬಗ್ಗೆ ಬೇರೆ ಬೇರೆ ಕಾಲದಲ್ಲಿ ಮಂತ್ರಿಗಳ ಮುಂದೆ ಚರ್ಚೆಯಾಗಿದೆ. ಈ ವಿಷಯವನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಆದರೆ ಇದು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಇನ್ನು 6 ತಿಂಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಶಾನುಭೋಗರು ಸುಪ್ರೀಮ್‌ಕೋರ್ಟಿಗೆ ಹೋಗಿ ಆದೇಶ ತಂದ ಮೇಲೆ ಅವರಿಗೆ ಕೊಟ್ಟರಿ. ಜೋಡಿ ಗ್ರಾಮಗಳಲ್ಲಿ ಯಾರು ಕೆಲಸ ಮಾಡಿದ್ದಾರೆ ಅವರಿಗೆ ಕೊಡುವುದಕ್ಕೆ ಬರುವುದಿಲ್ಲವೆಂದು ತಿಳಿಯಿತು. ಅವರಿಗೂ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೀರಾ? ಶಾನುಭೋಗರು ಎಷ್ಟು ಕೆಲಸ ಮಾಡಿದ್ದಾರೋ ಅಷ್ಟೇ ಕೆಲಸವನ್ನು ಪಟೇಲರೂ ಮಾಡಿದ್ದಾರೆ. ಆದರೆ ಇವರಿಗೆ ಕೊಡದಿರುವುದಕ್ಕೆ ಕಾರಣ ಏನು ?

ಶ್ರೀ ಬಿ. ಎಲ್. ಪಾಟೀಲ್.—ಇದನ್ನು ನಾನು ಅನುಶಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಮಾನ್ಯ ಸದಸ್ಯರ ಸಲಹೆ ಸಮರ್ಪಕವಾಗಿದ್ದು ಅದನ್ನು ಪರಿಶೀಲನೆ ಮಾಡುತ್ತೇನೆ.

ಗದಗ—ಬೆಟಿಗೇರಿ ನೀರು ಪೂರೈಕೆ ಬಗ್ಗೆ

155 ಸಿ. ಎಸ್. ಮುತ್ತಿನಪೆಂಡಿಮಠ (ಗದಗ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೆ —

ಅ) ಅವಳಿ ನಗರಗಳಾದ ಗದಗ್-ಬೆಟಿಗೇರಿಯಲ್ಲಿ ಸುಮಾರು 1.5 ಲಕ್ಷ ಜನಸಂಖ್ಯೆ ಇದ್ದು ನೀರಿನ ಅಭಾವದಿಂದ ತೀವ್ರ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ವರೆಗೆ ನೀರು ಪೂರೈಕೆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ;

ಇ) ಇಲ್ಲವಾದಲ್ಲಿ ಸರ್ಕಾರ ಅತಿ ಶೀಘ್ರದಲ್ಲಿ ನೀರು ಪೂರೈಕೆ ಮಾಡಲು ಸಮಗ್ರ ಯೋಜನೆ ಹಾಕಿಕೊಳ್ಳುವುದೆ ?

ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ವಸತಿ ಸೌಕರ್ಯ ಸಚಿವರು).—ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) 1) ಗದಗ್-ಬೆಟಿಗೇರಿ ನಗರಕ್ಕೆ ತುಂಗಭದ್ರ ನದಿಯಿಂದ ನೀರು ಸರಬರಾಜು ಮಾಡಲು ಸರ್ಕಾರ 708.00 ಲಕ್ಷ ರೂ. ಗಳ ಅಂದಾಜನ್ನು ಮಂಜೂರು ಮಾಡಿದೆ.

(2) ತಾತ್ಕಾಲಿಕ ನಿವಾರಣೆಗಾಗಿ ಇದುವರೆಗೆ ಒಟ್ಟಾಗಿ 43 ಕೊಳವೆಬಾವಿಗಳನ್ನು ತೋಡಿ 35 ಫಲಪ್ರದವಾದ ಬಾವಿಗಳನ್ನು ಸೂಕ್ತವಾದ ಪಂಪುಗಳನ್ನು ಜೋಡಿಸಿ ನೀರನ್ನು ಒದಗಿಸಲಾಗುತ್ತಿದೆ.

(3) ಈಗಾಗಲೇ 3 ಕ್ಲೋರಿನೇಟರ್‌ಗಳನ್ನು ಜೋಡಿಸಲಾಗಿದೆ. ಇನ್ನು 7 ಕ್ಲೋರಿನೇಟರ್‌ಗಳನ್ನು ಜೋಡಿಸಲು ಕ್ರಮ ಕೈಗೊಳ್ಳಲಾಗಿದೆ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಧರ್ಮಸಿಂಗ್.—ಸ್ವಾಮಿ, 7.40 ಲಕ್ಷ ರೂಪಾಯಿ ಮಂಜೂರು ಮಾಡಿದ್ದೇವೆಂದು ಹೇಳಿದಿರಿ. ಈಗ ಜನಸಂಖ್ಯೆ ಜಾಸ್ತಿಯಾಗಿದ್ದು ನೀರಿನ ತೊಂದರೆ ಬಹಳ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಈಗಾಗಲೇ ಒಂದು ಯೋಜನೆ ಇದ್ದು, ಒಂದು ಸಾವಿರ ಗ್ಯಾಲನ್ ನೀರಿಗೆ 13 ರೂಪಾಯಿ ಬೀಳುವುದರಿಂದ ಅದನ್ನು ಎಲ್ ಐ. ಸಿ. ಯವರು ಒಪ್ಪುತ್ತಿಲ್ಲ. ಅದಕ್ಕೋಸ್ಕರ ಬೇರೆ ಒಂದು ಯೋಜನೆ ಮಾಡಲು ಹಿಂದಿನ ಸರ್ಕಾರ ಒಪ್ಪಿತ್ತು. ಈ ವಿಚಾರದಲ್ಲಿ ನಾವು ಎಲ್ ಐ ಸಿ. ಛೇರ್ಮನ್‌ಗೆ ಭೇಟಿಯಾದಾಗ ಕಡಿಮೆ ವೆಚ್ಚದಲ್ಲಿ ಒಂದು ಯೋಜನೆ ತಯಾರು ಮಾಡಿ ಎಂದು ಹೇಳಿದ್ದರ ಮೇರೆಗೆ ತಜ್ಞರ ಸಮಿತಿಗೆ ಇದನ್ನು ಹಿಂದಿನ ಸರ್ಕಾರ ಒಪ್ಪಿಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಿಂದಿನ ಮಂತ್ರಿಗಳಿಗೆ ಈ ಬಗ್ಗೆ ತಿಳುವಳಿಕೆ ಇದ್ದರೂ ಕೂಡ ಏತಕ್ಕೆ ಮಂಜೂರಾತಿ ಕೊಟ್ಟರೋ ಗೊತ್ತಾಗಲಿಲ್ಲ. ಆಗಲೇ ಇದನ್ನು ನಿರಾಕರಣೆ ಮಾಡಬಹುದಾಗಿತ್ತು. ನಾವು ಕಾವೇರಿ ನೀರಿನ ಬಗ್ಗೆ ಎಲ್. ಐ ಸಿ ಅಧ್ಯಕ್ಷರನ್ನು ಭೇಟಿಯಾಗುವುದಕ್ಕೆ ಹೋದಾಗ, ಹುಬ್ಬಾರಿ ವೆಚ್ಚವಾದರೆ ನಾಗರೀಕರು ಕೊಡುವುದಕ್ಕೆ ಸಾಧ್ಯವೆ ಎಂಬುದನ್ನು ಕೇಳಿದರು.

ಅದಕ್ಕೋಸ್ಕರ ಇದನ್ನು ತಡೆಹಿಡಿದು, ತಜ್ಞರ ಸಮಿತಿಗೆ ಕೊಟ್ಟಿದ್ದೇವೆ, ಅವರಿಂದ ವರದಿ ಬಂದಿಲ್ಲ, ವರದಿ ಬಂದಕೂಡಲೇ ಆಲೋಡನೆ ಮಾಡಬೇಕಾಗುತ್ತದೆ. ಬೆಳೆಯತಕ್ಕ ನಗರಕ್ಕೆ ಪುಲಪ್ರಭಾ ಯೋಜನೆಯಿಂದಲಾದರೂ, ಯಾವುದೇ ರೂಪದಲ್ಲಾದರೂ ನೀರಿನ ವ್ಯವಸ್ಥೆ ಮಾಡುವುದು ಎಲ್ಲರ ಕರ್ತವ್ಯ. ತುಂಗಭದ್ರಾ ನದಿಯಿಂದ ನೀರು ಒದಗಿಸುವುದು ಎಲ್ಲರಿಗೂ ಗೊತ್ತಿದೆ. ತಜ್ಞರ ಸಮಿತಿ ವರದಿ ಬಂದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎಸ್ ಆಚಾರ್ಯ.—1979ನೇ ಇಸವಿಯಿಂದ ಒಂದು ನಯಾಪೈಸೆ ಕೂಡ ಖರ್ಚಾಗಿಲ್ಲ. ಬೋರ್‌ವೆಲ್ ನೀರೂ ಕೂಡ ಕುಡಿಯುವುದಕ್ಕೆ ಸರಿಯಿಲ್ಲವೆಂದು ಹೇಳುತ್ತಿದ್ದಾರೆ

ಶ್ರೀ ಎಂ. ಚಂದ್ರಶೇಖರ್.—ತಜ್ಞರ ಸಮಿತಿ ವರದಿ ಬಂದ ಕೂಡಲೇ ಮುಂದಿನ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—1979 ನಂತರ ಒಂದು ನಯಾಪೈಸೆ ಖರ್ಚಾಗಿಲ್ಲ.

ಶ್ರೀ ಎಂ. ಚಂದ್ರಶೇಖರ್. —ಮುಂಜೂರಾತಿಯಾದ ಮೇಲೆ ಎಲ್. ಐ. ಸಿ ಯವರು ಸ್ಥಳಕ್ಕೆ ಹೋದಾಗ ಈ ಪ್ರಶ್ನೆ ಉದ್ಭವನವಾಯಿತು.

ಶ್ರೀ ಎಂ. ಎಂ. ನಡಾಫ್.—ಆದಷ್ಟು ಬೇಗ, ಆದಷ್ಟು ಜಾಗ್ರತೆ ಎಂದು ಹೇಳುವುದು ನಾವೂ ಆಗಿದೆ. ಮೂರು ತಿಂಗಳು ಆರು ತಿಂಗಳಲ್ಲಿ ಮುಗಿಸುತ್ತೇನೆಂದು ಎಷ್ಟಾನ ಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ನೂರು ಕೊಟ್ಟಿದೆ, 7 ನೆಯದು ನಡೆಯುತ್ತಿದೆ. ಇನ್ನು ಎರಡು ಮೂರು ತಿಂಗಳಲ್ಲಿ ಮುಕ್ತಾಯವಾಗಿ, ಶುದ್ಧವಾದ ನೀರು ಬರುವುದಕ್ಕೆ ಅನುಕೂಲವಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ಜಮೀನನ್ನು ಅತಿಕ್ರಮಣ ಮಾಡಿ ಮನೆಗಳನ್ನು ಕಟ್ಟಿಸಿರುವ ಬಗ್ಗೆ

156 ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೆ --

(ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ್ ಪಟ್ಟಣದಲ್ಲಿ ಎಷ್ಟು ಜನರು ಸರಕಾರಿ ಜಮೀನುಗಳಲ್ಲಿ ಅತಿಕ್ರಮಣ ಮಾಡಿ ಮನೆ ಕಟ್ಟಿದ್ದಾರೆ ಎಷ್ಟು ಜನರಿಗೆ ಅತಿಕ್ರಮಿಸಿದ ಜಮೀನನ್ನು ಕ್ರಮಗೊಳಿಸಲಾಗಿದೆ ; (ಕಳೆದ 3 ವರ್ಷದ ಮಾಹಿತಿಯನ್ನು ಒದಗಿಸುವುದು)

(ಆ) ಈ ಮೀಸಲು ಜಮೀನನ್ನು ಕಳೆದ ವರ್ಷ ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಖಾಸಗಿ ಜನರಿಗೆ ಮುಂಜೂರು ಮಾಡಲಾಯಿತೆ ಹಾಗಿದ್ದಲ್ಲಿ ಈ ಮುಂಜೂರಾತಿಗೆ ಬಲವತ್ತರವಾದ ಕಾರಣಗಳೇನು;

(ಕಳೆದ 3 ವರ್ಷದ ಮಾಹಿತಿಯನ್ನು ಒದಗಿಸುವುದು)

(ಇ) ಡಿಸೆಂಬರ್ ತಿಂಗಳಲ್ಲಿ ಖಾಸಗಿ ಜನರಿಗೆ ಮುಂಜೂರು ಮಾಡಲಾಗಿದೆಯೇ ? ಹಾಗಿದ್ದಲ್ಲಿ ಈ ಮುಂಜೂರು ಕಾನೂನು ಬದ್ಧವಾಗಿದೆಯೆ, ಹಾಗಿಲ್ಲದಿದ್ದಲ್ಲಿ ಸರ್ಕಾರದವರು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲು ಉದ್ದೇಶಿಸಿರುವರೆ;

(ಈ) ಆರೋಗ್ಯ ಖಾತೆಯವರಿಂದ ಸ. ನಂ. 353 ಸ್ಥಳ ಖಾಸಗಿಯವರಿಗೆ ನೀಡಿದುದರ ಬಗ್ಗೆ ತಕರಾರು ಬಂದಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) --(ಅ) ಒಟ್ಟು 195 ಜನರು ಅತಿಕ್ರಮಣ ಮಾಡಿ ಮನೆಕಟ್ಟಿದ್ದಾರೆ ಇವರಲ್ಲಿ 176 ಜನರ ಅತಿಕ್ರಮಣಗಳನ್ನು ಕ್ರಮಬದ್ಧಗೊಳಿಸಲಾಗಿದೆ.

ಕಳೆದ 3 ವರ್ಷದ ಮಾಹಿತಿ ಇಂತಿವೆ.

1979-80	164
1980-81	9
1981-82	3
ಒಟ್ಟು	176

(ಆ) ಮೀಸಲು ಜಮೀನು ಇರುವುದಿಲ್ಲ ಆದ್ದರಿಂದ ಖಾಸಗಿ ಜನರಿಗೆ ಮುಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಹೌದು ಕಾನೂನು ಬದ್ಧವಾಗಿದೆ.